13) Bijapur Power Project in Bijapur District, Capacity-350MW (Coal) - M/s. KEI Energy Ltd., Hyderabad.

Category -III-Banking and Wheeling Projects:

Jindal Tractebel Power Project near Tornagallu, Capacity: 260 MW (2 Units x 130 MW) Coal and Corex gas) -M/s. Jindal Tractebel Power Co.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸರತ್ಲಾಪಾಡ ಕೆರೆಯ ಕಾಮಗಾರಿಯ ಬಗ್ಗೆ

1374 (1706) ಶ್ರೀ ಬಸವಂತ ರೆಡ್ಡಿ ಪೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1994-95 ಸಾಲಿನ ಆಯವ್ಯಯದಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸಂತ್ಲಾಪಾಡ ಕೆರೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ ಕೆರೆಯ ಕಾಮಗಾರಿಯು ಈವರೆಗೂ ಪೂರ್ತಿಯಾಗದಿರುವುದಕ್ಕೆ ಕಾರಣಗಳೇನು :

ಇ) ಈ ಕೆರೆಯ ಅಡಿಪಾಯ ಕೆಲಸ ಭದ್ರವಾಗಿ ಆಗದೇ ವ್ಯವಹಾರವಾಗಿರುವುದು ನಿಜವೇ?

ಈ) ಈ ಕೆರೆಯ ಏರು(ಕಟ್ಟೆ) ಪೂರ್ತಿಯಾಗಿದೆಯೇ, ಈ ಕೆರೆಯ ಏರಿಗೆ ತಗಲಿರುವ ಖರ್ಚು ಎಷ್ಟು ?

ಉ) ಕೆರೆಯ ಕಾಮಗಾರಿಯು ಈಗ ಯಾವ ಹಂತದಲ್ಲಿದೆ.

ಊ) ಕಾಲುವೆಗಳ ಕೆಲಸ ಸ್ಥಗಿತಗೊಂಡಿರುವುದೇಕೆ : ಎರಡೂ ಕಡೆಯ ಕಾಲುವೆಗಳಿಗೆ ಇಲ್ಲಿಯವರೆಗೆ ಖರ್ಚಾಗುವ ಹಣವೆಷ್ಟು; ಅಂತರವೆಷ್ಟು; ಎರಡೂ ಕಡೆ ಕಾಲುವೆಗಳ ಒಟ್ಟು ಉದ್ದದ ಅಂತರವೆಷ್ಟು : ಈ ಕಾಲುವೆಗಳ ಯೋಜನೆಯಲ್ಲಿ ಪರ್ಶಿಗಳು ಹಾಕುವ ಕೆಲಸವಿದೆಯೇ:

ಋ) ಪ್ರಸಕ್ತ ವರ್ಷ ಕಾಲುವೆಗಳ ಕೆಲಸ ಪೂರ್ಣಗೊಳಿಸಿ ರೈತರಿಗೆ ನೀರು ಸರಬರಾಜು ಮಾಡಲಾಗುವುದೇ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಸದರಿ ಕೆರೆಯ ನಿರ್ಮಾಣವನ್ನು ಸರ್ಕಾರ ಆದೇಶ ಸಂ:ನೀಇ 70 ಸನೀಗು 97 ಬೆಂಗಳೂರು ದಿನಾಂಕ : 5-3-98ರ ಮೇರೆಗೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಗುಲ್ಬರ್ಗರವರ ದಿನಾಂಕ:20-4-98ರಂದು ವಹಿಸಲಾಗಿದೆ. 98-99ನೇ ಸಾಲಿನಲ್ಲಿ ಅನುದಾನ ಕಡಿಮೆ ಇದ್ದ ಕಾರಣ ಹಾಗೂ ಅತಿ ಮಳೆಯಿಂದ ಆಗಸ್ಟ್ 98ರಿಂದ ನವೆಂಬರ್ 98ರವರೆಗೆ ಸ್ಥಗಿತಗೊಂಡಿರುತ್ತದೆ.

ಇ) ನಿಜವಲ್ಲ.

ಈ) ಸವರಿ ಕೆರೆಯ ಏರಿ (ಕಟ್ಟೆ) ಪೂರ್ಣಗೊಂಡಿರುತ್ತದೆ. ಈ ಕೆರೆಯ ಏರಿಗೆ ತಗಲಿರುವ ಖರ್ಚು ರೂ: 76.00ಲಕ್ಷವಾಗಿರುತ್ತದೆ.

ಉ) ಕೆರೆಯ ಏರಿ, ತೂಬುಗಳು ಹಾಗೂ ಮೂರು ಡ್ರಾಪ್‌ಗಳ ಕೆಲಸವು ಪೂರ್ಣಗೊಂಡು ಬಲದಂಡೆ ಮತ್ತು ಎಡದಂಡೆ ಕಾಲುವೆಗಳ ಕೆಲಸ ಪ್ರಗತಿಯಲ್ಲಿದೆ.

ಊ) ಎರಡು ಕೆರೆಯ ಕಾಲುವೆಗಳಿಗೆ ಈವರೆಗೆ ಇನ್ನು ಹಣ ಖರ್ಚು ಆಗಿರುವುದಿಲ್ಲ. ಈ ಹಂತದಲ್ಲಿ ಅಂತ ನಿರ್ಧರಿಸುವುದು ಆಗುವುದಿಲ್ಲ. ಎಡದಂಡೆ ಕಾಲುವೆ 1.50ಕಿ.ಮೀ ಮತ್ತು ಬಲದಂಡೆ ಕಾಲುವೆ 2.52 ಕಿ.ಮೀ. ಉದ್ದವಿರುತ್ತದೆ. ಈ ಕಾಲುವೆಗಳ ಯೋಜನೆಯಲ್ಲಿ ಕಾನಲ್ ಲೈನಿಂಗ್ ಸಿ.ಡಿ.ಗಳ ನಿರ್ಮಾಣ ಔಟಲೇಟ್‌ಗಳು ಹಾಗೂ ಎಡದಂಡೆ ಕಾಲುವೆಯ ಅಕ್ವಡೆಕ್ಟ್ ನಿರ್ಮಾಣ ಬಾಕಿ ಇರುತ್ತದೆ.

ಋ) ನೀರು ಸರಬರಾಜು ಮಾಡಲು ಉದ್ದೇಶಿಸಿದೆ.

ರಾಜ್ಯದಲ್ಲಿ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ

1378 (1632) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ 31-3-99ಕ್ಕೆ ಎಷ್ಟು;

ಆ) 1999-2000ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಏತನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು;

ಇ) ಸ್ಥಗಿತಗೊಂಡಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ರಾಜ್ಯದ ಏತ ನೀರಾವರಿ ಯೋಜನೆಗಳು ಕೆ.ಇ.ಬಿ.ಗೆ ಕಟ್ಟಬೇಕಾದ ವಿದ್ಯುತ್ ಬಾಕಿ 31-12-99ಕ್ಕೆ ಎಷ್ಟು;

ಉ) ಈಎಲ್ಲಾ ಏತ ನೀರಾವರಿ ಯೋಜನೆಗಳಿಂದ ಆಗಬೇಕಾಗಿದ್ದ ನೀರಾವರಿ ಸಾಮರ್ಥ್ಯ ಎಷ್ಟು ಎಕರೆ;

ಊ) ವಾಸ್ತವಿಕವಾಗಿ ಎಷ್ಟು ಎಕರೆ ನೀರಾವರಿ ಆಗಿರುತ್ತದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ದಿನಾಂಕ: 31-03-1999ಕ್ಕೆ ಒಟ್ಟು ಏತನೀರಾವರಿ ಯೋಜನೆಗಳು 477.

ಆ) ಒಟ್ಟು 16 ಏತ ನೀರಾವರಿ ಯೋಜನೆಗಳು.

ಇ) ಒಟ್ಟು 133 ಏತನೀರಾವರಿ ಯೋಜನೆಗಳು ಸ್ಥಗಿತ ಗೊಂಡಿದೆ. ವಿವರಗಳು ಈ ಕೆಳಕಂಡಂತೆ ಇದೆ: